ಶ್ರೀ ಬಿ.ಎಸ್. ಯಡಿಯೂರಪ್ಪ: ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಆಗಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯ ಕೊಲೆ ಆಗಿದೆ....

ಜನತಾದಳ ಸದಸ್ಯರಿಂದ ಧರಣಿ

(ಈ ಹಂತದಲ್ಲಿ ಜನತಾ ದಳದ ಸದಸ್ಯರು ಬಾವಿಯಲ್ಲಿ ಧರಣಿ ಮಾಡತೊಡಗಿದ್ದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದು ಶಾಸನ ಸಭೆಗೆ ಮಾಡಿದಂತಹ ಅಗೌರವ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆ ನಡೆಯುತ್ತಿರುವಾಗ ಅಲ್ಲಿ ಚರ್ಚೆ ಮಾಡದೇ ಚುನಾವಣೆಯನ್ನು ಮುಂದಕ್ಕೆ ಹಾಕಿರುವುದು ಪ್ರಜಾತಂತ್ರದ ಕೊಲೆ ಆಗಿದೆ. ಪ್ರಜಾಪ್ರಭುತ್ವದ ಕೊಲೆ ಆಗಿದೆ. ಈ ಸದನವನ್ನು ಸರ್ಕಾರ ಕಡೆಗಣಿಸಿದೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ, ನಾನು ಚುನಾವಣೆಯನ್ನು ಮುಂದಕ್ಕೆ ಹಾಕಿರುವ ನೀತಿಯನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಡಾ॥ ಜೀವರಾಜ ಆಳ್ವ: ಮಾನ್ಯ ಅಧ್ಯಕ್ಷರೇ, ಚುನಾವಣೆಯನ್ನು ಮುಂದೂಡಿರುವುದು ರಾಜ್ಯ ಚುನಾವಣೆ ಆಯೋಗ. ಅವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದರೆ, ಈ ರಾಜ್ಯದ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ನವರು ಲಾ ಅಂಡ್ ಆರ್ಡರ್ ಸರಿಯಾಗಿಲ್ಲ ಎಂದು ಹೇಳಿದ್ದಾರೆ ಎನ್ನುವ ಕಾರಣದ ಮೇಲೆ ಮುಂದಕ್ಕೆ ಹಾಕಿದ್ದಾರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇವರು ಉದ್ದೇಶಪೂರ್ವಕವಾಗಿ ವಿವಾದ ಸೃಷ್ಟಿ ಮಾಡಿ ಚುನಾವಣೆ ನಡೆಯದಂತೆ ನೋಡಿಕೊಳ್ಳುವ ಸಂಚು. ಇದು. ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಇದರಲ್ಲಿ ಜನತಾದಳದವರು ಶಾಮೀಲಾಗಿದ್ದಾರೆ. ಈ ಸದನ ನಡೆಯುತ್ತಿರಬೇಕಾದರೆ ತಾವು ಏತಕ್ಕೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿರಿ. ಈ ಮನೆಯನ್ನು ತಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಲಾ ಅಂಡ್ ಆರ್ಡರ್ ಕೆಟ್ಟಿದೆ ಎನ್ನುವುದನ್ನು ಮುಂದೆ ಮಾಡಿ ಚುನಾವಣೆ ಮುಂದಕ್ಕೆ ಹಾಕಿದಿರಿ. ಲಾ ಅಂಡ್ ಆರ್ಡರ್ ಕೆಟ್ಟಿದ್ದರೆ ಅದನ್ನು ನಿರ್ವಹಿಸಲಿಕ್ಕೆ ಆಗದೆ ಇರುವಂತಹ ಸಂದರ್ಭದಲ್ಲಿ ಮಾನ್ಯಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಿ. ಅಧಿಕಾರದ ವಿಕೇಂದ್ರೀಕರಣ ಮಾಡುತ್ತೇವೆಂದು ಸುಪ್ರೀಂ ಕೋರ್ಟಿನಲ್ಲಿ ಅಂಡರ್ ಟೇಕಿಂಗ್ ಕೊಟ್ಟು ಚುನಾವಣೆಯನ್ನು ನಡೆಸುತ್ತೇವೆಂದು ಹೇಳಿ ಚುನಾವಣೆ ಮುಂದಕ್ಕೆ ಹಾಕುವಂತಹ ಸಂಚುಮಾಡಿದ್ದೀರಿ. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಪತ್ರವನ್ನು ತಾವು ಚುನಾವಣೆ ಆಯೋಗಕ್ಕೆ ಬರೆದಿದ್ದೀರಿ. ಅದಕ್ಕೆ ವಿಶೇಷವಾದ ಕಾರಣ ಏನು ಇತ್ತು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ತಾವು ಗೃಹ ಖಾತೆಯನ್ನು ಹೊಂದಿರುವುದರಿಂದ ಅಂಕಿಅಂಶಗಳನ್ನು ಸಭೆಯ ಮುಂದೆ ಇಡಿ.....

(ಗೊಂದಲ)